ಕರ್ನಾಟಕ ಸರ್ಕಾರ
ಕರ್ನಾಟಕ ವೈದ್ಯಕೀಯ ವಿಜ್ಞಾನ ಸಂಸ್ಥೆ, ಹುಬ್ಬಳ್ಳಿ-580022
**KARNATAKA INSTITUTE OF MEDICAL SCIENCES, HUBLI-580022.**
Ph :(0)0836-2373348 Fax :0836-2373724

**No:KIMS:EST(1)A : 283 :2019-20**

**Date: 31-10-2019**

## NOTIFICATION

Karnataka Institute of Medical Sciences, Hubballi invites applications for the permanent post of Director. The eligible candidates should submit the applications with relevant documents to the Chief Administrative Officer, KIMS, Hubballi along with DD of Rs. 5000/- (non-refundable) in favour of Director, KIMS, Hubballi on or before date : 08-11-2019 evening 5.00 pm.

For further details to download the application from KIMS website : www.kimshubballi.org. The date of interview will be intimated to the candidate later.

Member Secretary
Selection committee &
Chief Administrative Officer,
Karnataka Institute of Medical Sciences,
Hubballi.

ಕರ್ನಾಟಕ ಸರ್ಕಾರ
ಕರ್ನಾಟಕ ವೈದ್ಯಕೀಯ ವಿಜ್ಞಾನ ಸಂಸ್ಥೆ, ಹುಬ್ಬಳ್ಳಿ-580022
**KARNATAKA INSTITUTE OF MEDICAL SCIENCES, HUBLI-580022.**
Ph :(0)0836-2373348 Fax :0836-2373724

No:KIMS:EST(1)A : 283:2019-20 Date: 31-10-2019

**NOTIFICATION**

Applications are invited from eligible candidates for the post of Director at Karnataka Institute of Medical Sciences, Hubballi.

**Eligible Criteria :-**

1. The Candidates for the said post shall be selected based on seniority cum merit from amongst the Professors in this Institution.
2. Post graduate degree in any specialty with minimum of ten years teaching experience as Professor / Associate Professor rendered in KIMS, Hubballi out of which minimum five years experience should be as Professor.
3. Candidates shall have Administrative experience either as Medical Superintendent or as Head of Department at least for Five Years.
4. Maximum upper age limit shall be two years earlier to superannuation i.e. should not have completed 58 years as on the last date for submission of application.
5. Candidates probationary period must have been declared.
6. Candidates shall satisfy the norms of Medical Council of India for the said post.
7. Eligible criteria as per KIMS, Hubballi byelaw & MCI norms.

**Mode of selection :** - Senior most eligilble Professor amongst the applicants shall be short listed & called for interview, date and Venue intimated later.

**Period of Applointment :** - Maximum four years the date of appointment or until further Government order whichever is earlier.

**Instructions:-** Candidates applying to the Director post shall submit application in an prescribed format which can be downloaded from the KIMS Hubballi website : www.kimshubballi.org and filled up application should submit to the Chief Administrative Officer, KIMS Hubballi "by registred post with acknowledgement due " with a non – refundable DD for Rs. 5000/- drawn in favor of Director, KIMS Hubballi along with relevant supporting documents.

Last date for submission of applications : 08-11-2019 before 5.00 PM.

Member Secretary
Selection committee &
Chief Administrative Officer,
Karnataka Institute of Medical Sciences,
Hubballi.

ಕರ್ನಾಟಕ ಸರ್ಕಾರ
ಕರ್ನಾಟಕ ವೈದ್ಯಕೀಯ ವಿಜ್ಞಾನ ಸಂಸ್ಥೆ, ಹುಬ್ಬಳ್ಳಿ-580021
**KARNATAKA INSTITUTE OF MEDICAL SCIENCES, HUBBALLI-580021**
**Ph :(0)0836-2373348 Fax :0836-2373724**

ಸಂ. ಕಿಮ್ಸ/ಸಿಬಿ(1)ಎ/ 283 /2019-20 ದಿನಾಂಕ: 31-10-2019.

## ಪತ್ರಿಕಾ ಪ್ರಕಟಣೆ

ಕರ್ನಾಟಕ ವೈದ್ಯಕೀಯ ವಿಜ್ಞಾನ ಸಂಸ್ಥೆ, ಹುಬ್ಬಳ್ಳಿ, ಈ ಸಂಸ್ಥೆಯ ನಿರ್ದೇಶಕರ ಹುದ್ದೆಯ ಖಾಯಂ ನೇಮಕಾತಿಗಾಗಿ ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಅಹ್ವಾನಿಸಲಾಗಿದೆ. ನಿರ್ದೇಶಕರು, ಕಿಮ್ಸ್ ಹುಬ್ಬಳ್ಳಿ, ಇವರ ಹೆಸರಿನಲ್ಲಿ ರೂ.5000/-ಗಳ ಡಿಮ್ಯಾಂಡ್ ಡ್ರಾಫ್ಟ್ ಅನ್ನು (ಹಿಂದಿರುಗಿಸಲಾಗದಿರುವ) ಪಡೆದು ಅಗ್ಯತ ದಾಖಲಾತಿಗಳೊಂದಿಗೆ ಅರ್ಜಿಯನ್ನು ಮುಖ್ಯ ಆಡಳಿತಾಧಿಕಾರಿಗಳು, ಕಿಮ್ಸ್ ಹುಬ್ಬಳ್ಳಿ, ಇವರಿಗೆ ದಿನಾಂಕ: 08-11-2019 ರಂದು ಸಂಜೆ 5.00 ಗಂಟೆಯೊಳಗೆ ಸಲ್ಲಿಸತಕ್ಕದ್ದು. ಸಂದರ್ಶನದ ದಿನಾಂಕವನ್ನು ತದನಂತರ ತಿಳಿಸಲಾಗುವುದು.

ನಿಗದಿತ ಅರ್ಜಿ ನಮೂನೆ ಹಾಗೂ ಹೆಚ್ಚಿನ ಇತರೆ ಮಾಹಿತಿಗಳನ್ನು ಕಿಮ್ಸ್ ಸಂಸ್ಥೆಯ ವೆಬ್ ಸೈಟ್ www.kimshubballi.org ನಲ್ಲಿ ಡೌನ್ ಲೋಡ್ ಮಾಡಿಕೊಳ್ಳತಕ್ಕದ್ದು.

ಸದಸ್ಯ ಕಾರ್ಯದರ್ಶಿಗಳು ಆಯ್ಕೆ ಸಮಿತಿ
ಮತ್ತು ಮುಖ್ಯ ಆಡಳಿತಧಿಕಾರಿಗಳು
ಕಿಮ್ಸ್ ಹುಬ್ಬಳ್ಳಿ

ಕರ್ನಾಟಕ ಸರ್ಕಾರ
ಕರ್ನಾಟಕ ವೈದ್ಯಕೀಯ ವಿಜ್ಞಾನ ಸಂಸ್ಥೆ, ಹುಬ್ಬಳ್ಳಿ-580021
KARNATAKA INSTITUTE OF MEDICAL SCIENCES, HUBBALLI-580021
Ph :(0)0836-2373348 Fax :0836-2373724

ಸಂ. ಕಿಮ್ಸ/ಸಿವಿ(1)ಎ/ 283/ 2019-20 ದಿನಾಂಕ: 31-10-2019.

## ಅಧಿಸೂಚನೆ

ಕರ್ನಾಟಕ ವೈದ್ಯಕೀಯ ವಿಜ್ಞಾನ ಸಂಸ್ಥೆ, ಹುಬ್ಬಳ್ಳಿ, ಈ ಸಂಸ್ಥೆಯ ನಿರ್ದೇಶಕರ ಖಾಯಂ ಹುದ್ದೆಯ ನೇಮಕಾತಿಗಾಗಿ ಅರ್ಹ ಅಭ್ಯರ್ಥಿಗಳನ್ನು ಅಹ್ವಾನಿಸಲಾಗಿದೆ. ನಿಗದಿತ ಕನಿಷ್ಠ ವಿದ್ಯಾರ್ಹತೆ ಮತ್ತು ಇತರೆ ವಿವರಗಳು ಎಂ.ಸಿ.ಐ ನಿಯಮಾವಳಿಗಳನ್ವಯ ಹಾಗೂ ಸದರಿ ಸಂಸ್ಥೆಯ ಬೈಲಾಗಳನ್ವಯ ಪರಿಗಣಿಸಲಾಗುವುದು.

**ಅರ್ಹತಾ ಮಾನದಂಡಗಳು :-**

1. ಕಿಮ್ಸ್ ಸಂಸ್ಥೆಯಲ್ಲಿ ಜೇಷ್ಠತೆ ಮತ್ತು ಅರ್ಹತೆ ಹೊಂದಿದ ಪ್ರಾಧ್ಯಾಪಕರನ್ನು ಮಾತ್ರ ಆಯ್ಕೆ ಮಾಡಲಾಗುವದು.
2. ಭಾರತೀಯ ವೈದ್ಯಕೀಯ ಪರಿಷತ್ತಿನಿಂದ ಮಾನ್ಯತೆ ಪಡೆದ ಶಿಕ್ಷಣ ಸಂಸ್ಥೆಗಳಿಂದ ವೈದ್ಯಕೀಯ ಶಿಕ್ಷಣದ ಸ್ನಾತಕೋತ್ತರ ಪದವಿಯನ್ನು ಹೊಂದಿ ವೈದ್ಯಕೀಯ ಪರಿಷತ್ತಿನಿಂದ ಮಾನ್ಯತೆ ಪಡೆದಿರಬೇಕು, ಕರ್ನಾಟಕ ವೈದ್ಯಕೀಯ ವಿಜ್ಞಾನ ಸಂಸ್ಥೆ, ಹುಬ್ಬಳ್ಳಿಯಲ್ಲಿ ಕನಿಷ್ಠ 10 ವರ್ಷ ಪ್ರಾಧ್ಯಾಪಕರಾಗಿ/ ಸಹ ಪ್ರಾಧ್ಯಾಪಕರಾಗಿ/ ರೀಡರ್ ಆಗಿ ಕರ್ತವ್ಯ ನಿರ್ವಹಿಸಿದ ಬೋಧನಾ ಅನುಭವ ಹೊಂದಿರಬೇಕು. ಈ ಪೈಕಿ ವಿಭಾಗವೊಂದರಲ್ಲಿ ಕನಿಷ್ಠ 5 ವರ್ಷ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸಿರಬೇಕು.
3. ಈ ಹುದ್ದೆಗಳ ನೇಮಕಾತಿಯಲ್ಲಿ ವಿಭಾದ ಮುಖ್ಯಸ್ಥರಿಗೆ ಆದ್ಯತೆ ನೀಡಲಾಗುವುದು. ನಿರ್ದೇಶಕರ ಆಯ್ಕೆಯನ್ನು ಭಾರತೀಯ ವೈದ್ಯಕೀಯ ಪರಿಷತ್ತಿನ ನಿಯಮಾವಳಿ ಪ್ರಕಾರ ಹಾಗೂ ಸಂಸ್ಥೆಗಳ ಬೈಲಾ ರೀತ್ಯಾ ಮಾಡಲಾಗುವುದು.
4. ಅಭ್ಯರ್ಥಿಗಳು ವೈದ್ಯಕೀಯ ಅಧೀಕ್ಷಕರಾಗಿ ಆಡಳಿತಾನುಭವ ಹೊಂದಿರಬೇಕು ಅಥವಾ ವಿಭಾಗದ ಮುಖ್ಯಸ್ಥರಾಗಿ 5 ವರ್ಷಗಳ ಕಾಲ ಕರ್ತವ್ಯ ನಿರ್ವಹಿಸಿದವರಿಗೆ ಆದ್ಯತೆ ನೀಡಲಾಗುವುದು.
5. ಅರ್ಜಿ ಸಲ್ಲಿಸುವ ಅಭ್ಯರ್ಥಿಯ ವಯಸ್ಸು 58 ವರ್ಷಗಳನ್ನು ಮೀರಿರಬಾರದು ಅಥವಾ ವಯೋನಿವೃತ್ತಿ ಹೊಂದಲು ಕನಿಷ್ಠ 2 ವರ್ಷಗಳ ಸೇವಾ ಅವಧಿ ಬಾಕಿ ಇರಬೇಕು.
6. ಅಭ್ಯರ್ಥಿಯು ಖಾಯಂ ಪೂರ್ವಾ ಸೇವಾ ಅವಧಿಯನ್ನು ಪೂರ್ಣಗೊಳಿಸಿರಬೇಕು.
7. ಅರ್ಹತಾ ಮಾನದಂಡ ಕರ್ನಾಟಕ ವೈದ್ಯಕೀಯ ವಿಜ್ಞಾನ ಸಂಸ್ಥೆ, ಹುಬ್ಬಳ್ಳಿ, ಸಂಸ್ಥೆಯ ಬೈಲಾದಂತೆ ಮತ್ತು ಭಾರತೀಯ ವೈದ್ಯಕೀಯ ಪರಿಷತ್ತಿನ ನಿಯಮಾವಳಿ ಪ್ರಕಾರ.

**ವೇತನ ಶ್ರೇಣಿ:-** 37400-67000+ಎ.ಜಿ.ಪಿ 10000/- ಮತ್ತು ಅನ್ವಯವಾಗುವ ಭತ್ಯೆಗಳು.

**ಸೇವಾವಧಿ:-**

1. ನೇಮಕಾತಿಯ ದಿನಾಂಕದಿಂದ ನಾಲ್ಕು ವರ್ಷಗಳು, ಅಥವಾ ಮುಂದಿನ ಸರ್ಕಾರದ ಆದೇಶದವರೆಗೆ (ಯಾವುದು ಮೊದಲೊ ಅಲ್ಲಿಯವರೆಗೆ)

2. ನಿಗದಿತ ಅರ್ಜಿ ನಮೂನೆಯನ್ನು ಕಿಮ್ಸ್ ಸಂಸ್ಥೆಯ ವೆಬ್ ಸೈಟ್ www.kimshubballi.org ಇಲ್ಲಿಂದ ಡೌನ್‌ಲೋಡ್ ಮಾಡಿಕೊಂಡು ನಿರ್ದೇಶಕರ, ಕಿಮ್ಸ್ ಹುಬ್ಬಳ್ಳಿ ಇವರ ಹೆಸರಿನಲ್ಲಿ ರೂ.5000/-ಗಳ (ಹಿಂದಿರುಗಿಸಲಾಗದಿರುವ) ಡಿಮ್ಯಾಂಡ್ ಡ್ರಾಫ್ಟ್ ಅನ್ನು ಪಡೆದು ಭರ್ತಿ ಮಾಡಿದ ಅರ್ಜಿಯೊಂದಿಗೆ (ಅಗತ್ಯ ದಾಖಲೆಗಳು ಸೇರಿದಂತೆ) ಮುಖ್ಯ ಆಡಳಿತಾಧಿಕಾರಿಗಳು, ಕಿಮ್ಸ್ ಹುಬ್ಬಳ್ಳಿ, ಇವರಿಗೆ ನೊಂದಾಯಿತ ಅಂಚೆ ಮುಖಾಂತರ ಸ್ವೀಕೃತ ಬಾಕಿ ಪತ್ರದೊಂದಿಗೆ ದಿನಾಂಕ: 08-11-2019 ರಂದು ಸಂಜೆ 5.00 ಗಂಟೆಯೊಳಗೆ ತಲುಪಿಸತಕ್ಕದ್ದು.

ಸದಸ್ಯ ಕಾರ್ಯದರ್ಶಿಗಳು ಆಯ್ಕೆ ಸಮಿತಿ
ಮತ್ತು ಮುಖ್ಯ ಆಡಳಿತಧಿಕಾರಿಗಳು
ಕಿಮ್ಸ್ ಹುಬ್ಬಳ್ಳಿ